ಚಿಕ್ಕಬಳ್ಳಾಪುರದಲ್ಲಿ ಬಸ್ ನಿಲ್ದಾಣದ ನಿರ್ಮಾಣ.

೧೪೬೭. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರದಲ್ಲಿ ಹಾಲಿ ಇರುವ ಪುರಸಭೆ ಬಸ್ ನಿಲ್ದಾಣದ ಅವ್ಯವಸ್ಥೆ ಮತ್ತು ಇಕ್ಕಟ್ಟಿನಿಂದ ಕೂಡಿದ್ದು ಸುವ್ಯವಸ್ಥೆಯಿಂದ ಕೂಡಿದ ಬಸ್ ನಿಲ್ದಾಣವನ್ನು ಸರ್ಕಾರದವರು ನಿರ್ಮಿಸಲು ಕ್ರಮವೇನಾದರೂ ಕೈಗೊಂಡಿರುವರೆ?

ಆ) ಮೇಲ್ಕಂಡ ಬಸ್ ನಿಲ್ದಾಣವನ್ನು ನಿರ್ದಿಷ್ಟ ಅವಧಿಯೊಳಗೆ ನಿರ್ಮಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—(ಸಾರಿಗೆ ರಾಜ್ಯಮಂತ್ರಿಗಳು)

ಅ) ಇಲ್ಲಾ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಮ್. ಕೃಷ್ಣರೆಡ್ಡಿ (ಶ್ರೀ ಮುನಿಯಪ್ಪನವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಉಪವಿಭಾಗವಾಗಿದ್ದು ಸಾಕಷ್ಟು ಜನಸಂದಣಿಯಿಂದ ಕೂಡಿದಂತಹ ಸ್ಥಳವಾಗಿರುವುದರಿಂದ ಮತ್ತು ಹಾಲಿ ಇರತ್ಯಂತಹ ಬಸ್ ನಿಲ್ದಾಣ ಕಿಷ್ಕಿಂದವಾಗಿರುವುದರಿಂದಲೂ ಮುನಿಸಿಪಾಲಿಟಿಯವರು ತಿಮ್ಮೇಗೌಡರ ಕೆರೆ ಪ್ರದೇಶದಲ್ಲಿ ಬಸ್ ನಿಲ್ದಾಣವನ್ನು ಕಟ್ಟಬೇಕೆಂದು ಜಾಗ ತೋರಿಸಿ ಕೊಟ್ಟಿದ್ದಾರೆ. ಆದಷ್ಟು ಬೇಗ ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಮುನಿಸಿಪಲ್ ಜಾಗವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ ಪಕ್ಕದಲ್ಲಿ ಕೆರೆ ಇದೆ. ಅಲ್ಲಿ ಬಸ್ ನಿಲ್ದಾಣ ಕಟ್ಟಿಸಿಯೆಂದು ಹೇಳಿದ್ದಾರೆ ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣದ ಕೆಲಸ ಮಾಡಿಲ್ಲ. ಮುಂದೆ ಪರಿಶೀಲನೆ ಮಾಡಲಾಗುವುದು.

ಬಂಟ್ವಾಳ ತಾಲ್ಲೂಕಿನಿಂದ ಮಂಗಳೂರಿಗೆ ಓಡುತ್ತಿದ್ದ ಬಸ್ಸುಗಳನ್ನು ನಿಲ್ಲಿಸಿರುವುದು.

೧೪೬೮. ಶ್ರೀ ಬಿ.ಎ. ಉಮ್ಮರಬ್ಬ (ವಿಟ್ಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ತಾಲ್ಲೂಕಿನ ಪೆರುವಾಯ ಎಂಬಲ್ಲಿಂದ ಮಂಗಳೂರಿಗೆ ಓಡುತ್ತಿದ್ದ ಸರ್ಕಾರಿ ಬಸ್ಸು ಎಂದಿನಿಂದ ನಿಂತಿದೆ?

ಆ) ಮೇಲ್ಕಂಡ ಬಸ್ಸುಗಳ ಓಡಾಟ ನಿಲ್ಲಲು ಕಾರಣಗಳೇನು?

ಇ) ಈ ಬಗ್ಗೆ ಸರ್ಕಾರದ ಮುಂದಿನ ವ್ಯವಸ್ಥೆ ಏನು?

ಶ್ರೀ ಪಿ.ಜಿ. ಆರ್. ಸಿಂಧ್ಯಾ(ಸಾರಿಗೆ ರಾಜ್ಯ ಮಂತ್ರಿಗಳು),—

ಅ) ತಾ. ೧೦ನೇ ಜುಲೈ ೧೯೮೫ ರಿಂದ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಆ) ಪೆರುವಾಯ ಮತ್ತು ಮಂಗಳೂರ ಮಧ್ಯದ ರಸ್ತೆಯು ಕಚ್ಚಾ ರಸ್ತೆಯಾಗಿದ್ದು, ಮಳೆಗಾಲದಲ್ಲಿ ಭಾರಿ ವಾಹನಗಳ ಓಡಾಟಕ್ಕೆ ಸುರಕ್ಷಿತವಾಗಿರುವುದಿಲ್ಲ.

ಇ) ಮಳೆಗಾಲದ ನಂತರ ಈ ವಾಹನ ಸಂಚಾರವನ್ನು ಪುನಃ ಪ್ರಾರಂಭಿಸಲಾಗುವುದು.

ಶ್ರೀ ಬಿ.ಎ. ಉಮ್ಮರಬ್ಬ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಜುಲೈ ತಿಂಗಳಿನಿಂದ ಬಸ್ ನ್ನು ನಿಲ್ಲಿಸಲಾಗಿದೆಯೆಂದು ಹೇಳಿದ್ದಾರೆ. ಚುನಾವಣೆಯು ಸಮಯದಲ್ಲಿ ಅಲ್ಲಿನ ಜನತೆ ಮನವಿಯನ್ನು ಕೊಟ್ಟಿದ್ದಾರೆ. ಅಲ್ಲಿನ ರಸ್ತೆ ಕಚ್ಚಾ ರಸ್ತೆಯಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕಚ್ಚಾ ರಸ್ತೆ ಮತ್ತು ಹಚ್ಚ ರಸ್ತೆಯಾಗಿದ್ದು ಪೆರುವಾಯ ಮತ್ತು ಮಂಗಳೂರ ಮಧ್ಯದಲ್ಲಿ ಅಚ್ಚುಕಟ್ಟಾದಂತಹ ಡಾಂಬರ್ ರಸ್ತೆ ಇದ್ದುಲಾರಿಗಳು ಸರಾಗವಾಗಿ ಓಡಾಡುತ್ತಿವೆ. ಖಾಸಗಿಯವರು ಕೂಡಾ ಬಸ್‌ಗಳನ್ನು ಅದೇ ಮಾರ್ಗದಲ್ಲಿ ಓಡಿಸುವುದಕ್ಕೆ ಪರ್‌ಮಿಟ್‌ಗಾಗಿ ಅರ್ಜಿಗಳನ್ನು ಹಾಕಿದ್ದಾರೆ. ಸರ್ಕಾರಿ ಬಸ್‌ಗಳನ್ನು ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ.